**ಸಾಕ್ಷಿಗೆ ದಿನಾಂಕ 18.12.2023 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2 ನೇ ಎದುರುದಾರರ ಪರ ಶ್ರೀ. ನಾಗರಾಜ್ ವಕೀಲರಿಂದಃ**

1. ನನ್ನ ಫಿರ್ಯಾದಿಗೆ ಸಂಬಂಧಿಸಿದಂತೆ ಪೊಲೀಸರು ಸಿ-ರಿಪೋರ್ಟನ್ನು ಹಾಕಿರುವ ವಿಚಾರ ನನಗೆ ಗೊತ್ತಿರುತ್ತದೆ. ಸದರಿ ವರದಿಯ ಪ್ರಕಾರ ರಾಯಲ್ ಸುಂದರಂ ವಿಮಾ ಕಂಪನಿಯವರು ವಿಮಾ ಪತ್ರ ನೀಡಿರುವ ವಾಹನದ ಅಸಲಿ ಸಂಖ್ಯೆ ಕೆಎ-03-ಡಿ-3288 ಆಗಿರುತ್ತದೆ ಎಂದರೆ ಸರಿ. ಪೊಲೀಸರ ವರದಿಯ ಆದಾರದ ಮೇಲೆ ನನಗೆ ಡಿಕ್ಕಿ ಹೊಡೆದ ವಾಹನದ ಬಣ್ಣ ಹಳದಿ ಮತ್ತು ಕಪ್ಪು ಆಗಿತ್ತು ಎಂದರೆ ಸರಿ. ಫಿರ್ಯಾದನ್ನು ನೀಡಿದ ಕೂಡಲೆ ತನಿಖೆ ಮಾಡುವ ವೇಳೆಯಲ್ಲಿ ನೀಲಿ ಬಣ್ಣದ ವಾಹನ ಸಿಕ್ಕಿರುತ್ತದೆ ಎಂದರೆ ಸಾಕ್ಷಿ ವಾಹನದ ಸಂಖ್ಯೆ ಒಂದೇ ಇದೆ ವಾಹನದ ಬಣ್ಣ ಬದಲಾಯಿಸಲಾಗಿದೆ ಎಂದು ಹೇಳುತ್ತಾರೆ.

2. ವಿಮಾ ಕಂಪನಿಯ ಹೆಸರನ್ನು ಅಂತರ್ಜಾಲದ ಸಹಾಯದಿಂದ ಪತ್ತೆ ಹಚ್ಚಲಾಗಿರುತ್ತದೆ. ಆಪಾದಿತ ವಾಹನದ ಚಾಲಕ ಮತ್ತು ವಾಹನ ತನಿಖಾ ವೇಳೆಯಲ್ಲಿ ಸಿಗದಿದ್ದ ಕಾರಣ ಪೊಲೀಸರು ಸಿ-ರಿಪೋರ್ಟನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಸಿ-ಅಂತಿಮ ವರದಿಯನ್ನು ನಾನು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಅಂತಿಮ ವರದಿಗೆ ತಕರಾರು ಸಲ್ಲಿಸಲಾಗಿದೆ ಎಂದು ಸಾಕ್ಷಿ ಹೇಳುತ್ತಾರೆ, ನನಗೆ ಆಗಿರುವ ತೊಂದರೆಗಳಿಗೂ ಒಂದನೇ ಎದುರುದಾರರ ವಾಹನಕ್ಕೂ ಯಾವುದೇ ಸಂಬಂಧವಿಲ್ಲ

ಎಂದರೆ ಸರಿಯಲ್ಲ. ಅನಾಮಿಕ ವ್ಯಕ್ತಿಯ ವಾಹನದಿಂದ ನನಗೆ ತೊಂದರೆ ಆಗಿದೆ ಎಂದರೆ ಸರಿಯಲ್ಲ, ನನಗೆ ಆದ ಗಾಯಗಳು ವಾಸಿಯಾಗಿ ಈಗ ನಾನು ಮೊದಲಿನಂತೆ ಇದ್ದೇನೆ ಎಂದರೆ ಸರಿಯಲ್ಲ, ಮುಂದುವರೆದ ಚಿಕಿತ್ಸೆಯ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜುರ ಮಾಡಿಲ್ಲ ಆದರೆ, ಅದು ನನ್ನ ಬಳಿ ಇದೆ. ನನಗೆ ತಿಂಗಳಿಗೆ 1 ಲಕ್ಷ ಆದಾಯ ಇದೆ ಎಂದು ತೋರಿಸಲು ದಾಖಲೆಯನ್ನು ಹಾಜರು ಮಾಡಿರುವುದಿಲ್ಲ. ನನ್ನ ಚಿಕಿತ್ಸಾ ವೆಚ್ಚಕ್ಕೆ ಸಂಬಂಧಿಸಿದಂತೆ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಸಿಗಲಿ ಎನ್ನುವ ಉದ್ದೇಶದಿಂದ ಮೆಡಿಕಲ್ ಬಿಲ್ಲುಗಳನ್ನು ಸೃಷ್ಟಿ ಮಾಡಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾಹನದ ಮಾಲೀಕಳು ನಾನೇ ಆಗಿರುತ್ತೇನೆ, ಈಗಲೂ ಅದನ್ನು ನಾನು ಚಲಾಯಿಸುತ್ತಿದ್ದೇನೆ ಅದಕ್ಕೆ ಸಂಬಂಧಿಸಿದ ದಾಖಲೆಗಳು ನನ್ನ ಬಳಿ ಇದೆ. ನಾನು ಹೇಳಿದಂತೆ ಅಪಘಾತವಾಗದಿದ್ದರೂ ಸಹಾ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**